ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಅಂ.ಪೆ.ಸಂ. 5029, ಬೆಂಗಳೂರು-560 001
ದೂರವಾಣಿ : 080 22343905
ಫ್ಯಾಕ್ಸ್ : 080 22283758
ಇ-ಮೇಲ್ : bngcce@kar.nic.in

ಸಂಖ್ಯೆ:ಕಾಶಿಇ:156 :ತಾಂ.ಕೋ:2017-18

ದಿನಾಂಕ:17-06-2017

## ಸುತ್ತೋಲೆ

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಕಛೇರಿ/ಕಾಲೇಜುಗಳ ಜಮೀನು/ನಿವೇಶನಗಳು ಒತ್ತುವರಿ/ಅತಿಕ್ರಮಣ ಆಗಿರುವ ಬಗ್ಗೆ.

************

ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಪ್ರಾದೇಶಿಕ ಜಂಟಿ ನಿರ್ದೇಶಕರು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ ಇಲಾಖೆಯ ಕೆಲವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಈವರೆಗೆ ಜಮೀನು/ನಿವೇಶನ ಲಭ್ಯವಿಲ್ಲದೆ ಸರ್ಕಾರಿ ಕಟ್ಟಡಗಳಲ್ಲಿ ಹಾಗೂ ಖಾಸಗಿ ಕಟ್ಟಡಗಳಲ್ಲಿ ಬಾಡಿಗೆ ಆದಾರದ ಮೇರೆಗೆ ಕಾರ್ಯ ನಿರ್ವಹಿಸುತ್ತಿದ್ದು, ಜಮೀನು/ನಿವೇಶನಗಳು ಲಭ್ಯವಿರುವ ಕಾಲೇಜುಗಳ ಜಮೀನನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಹಾಗೂ ಅತಿಕ್ರಮಣಮಾಡುತ್ತಿರುವ ಬಗ್ಗೆ ದೂರುಗಳು ಈ ಕಛೇರಿಗೆ ಬರುತ್ತಿದ್ದು ಪ್ರಾಂಶುಪಾಲರುಗಳು ವೈಯುಕ್ತಿಕ ಗಮನ ಹರಿಸಿ ಕಾಲೇಜಿಗೆ ಅಗತ್ಯವಿರುವ ಜಮೀನು/ನಿವೇಶನವನ್ನು ಪಡೆಯಲು ಹಾಗೂ ಜಮೀನು ಲಭ್ಯವಿರುವ ಕಾಲೇಜುಗಳ ಪ್ರಾಂಶುಪಾಲರುಗಳು ಜಮೀನು/ನಿವೇಶನದ ದಾಖಲಾತಿಗಳ ಆಧಾರದ ಮೇರೆಗೆ ಪರಿಶೀಲನೆ ನಡೆಸಿ ಒತ್ತುವರಿ ಅಥವಾ ಅತಿಕ್ರಮಣವಾಗಿದ್ದಲ್ಲಿ ಸಂಬಂಧಿಸಿದ ಜಂಟಿ ನಿರ್ದೇಶಕರೊಂದಿಗೆ ಮಾನ್ಯ ಜಿಲ್ಲಾಧಿಕಾರಿಗಳನ್ನು ಖುದ್ದಾಗಿ ಸಂಪರ್ಕಿಸಿ ಸೂಕ್ತ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿ ನಿವೇಶನ/ಜಮೀನು ಪಡೆಯಲು ಹಾಗೂ ಒತ್ತುವರಿ/ಅತಿಕ್ರಮಣವನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ ಹಾಗೂ ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

17/6/17

ಕಾಲೇಜು ಶಿಕ್ಷಣ ಆಯುಕ್ತರು.

ಇವರಿಗೆ,

1) ಜಂಟಿ ನಿರ್ದೇಶಕರು ಪ್ರಾದೇಶಿಕ ಕಛೇರಿ ಬೆಂಗಳೂರು,ಮೈಸೂರು,ಮಂಗಳೂರು,ಶಿವಮೊಗ್ಗ,ಧಾರವಾಡ ಮತ್ತು ಕಲಬುರಗಿ.
2) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3) ಕಛೇರಿ ಪ್ರತಿ.